**O.S. 277-24 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 10.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ ಕೆ ಹೆಚ್, ವಕೀಲರಿಂದಃ**

4. ದಾವೆಯನ್ನು ನಾಗಪ್ಪ ಹಾಗೂ 4 ಜನ ಅಕ್ಕ ತಂಗಿಯರ ಮೇಲೆ ಹಾಕಿದ್ದೇನೆ. ವಿರುಪಾಕ್ಷಪ್ಪ ವಿರಪ್ಪ ಮಡ್ಡಿ ರವರು ನನಗೆ ಅಜ್ಜನಾಗಬೇಕು. ಅವರು 1964 ರಲ್ಲಿ ಮರಣ ಹೊಂದಿದರು ಅಂದರೆ ಸರಿ. ಈಗ ಸಾಕ್ಷಿಗೆ ವಿರುಪಾಕ್ಷಪ್ಪ ವಿರಪ್ಪ ಮಡ್ಡಿ ರವರ ಮರಣ ದಾಖಲೆ ತೋರಿಸಲಾಗಿ ಸಾಕ್ಷಿಯೂ ಮರಣ ದಾಖಲೆ ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಯನ್ನು ನಿಡಿ.1 ಎಂದು ಗುರುತಿಸಲಾಯಿತು. ವಿರುಪಾಕ್ಷಪ್ಪ ರವರ ಹೆಂಡತಿ ಹೆಸರು ಗೊತ್ತಿಲ್ಲ. ನಾನು ದಾವೆಯಲ್ಲಿ ವಿರುಪಾಕ್ಷಪ್ಪ ರವರ ಹೆಸರು ಬರೆಸಿಲ್ಲ. ಶಂಕರವ್ವ ಯಾರೆಂದು ಗೊತ್ತಿಲ್ಲ. ಶಂಕರವ್ವ ಹೆಸರು ವಂಶಾವಳಿಯಲ್ಲಿ ಬರೆಸಿಲ್ಲ. ವಿರುಪಾಕ್ಷಪ್ಪ ರವರ ಹೆಂಡತಿ ಹೆಸರು ಶಿವಬಸವ್ವ ಅಂದರೆ ಸರಿಯಲ್ಲ. ವಿರುಪಾಕ್ಷಪ್ಪ ರವರ ಮಕ್ಕಳ ಹೆಸರು 1) ಈರಪ್ಪ, 2) ಫಕ್ಕೀರಪ್ಪ 3) ಗಂಗಪ್ಪ 4) ಶಿವಪ್ಪ 5) ಗಿರಿಯವ್ವ 6) ಗುರವ್ವ.

5. ವಿರುಪಾಕ್ಷಪ್ಪನ 6 ಜನ ಮಕ್ಕಳು ಮರಣ ಹೊಂದಿದ್ದಾರೆ ಅಂದರೆ ಸರಿ. ಈರಪ್ಪನ ಹೆಂಡತಿ ಹೆಸರು ಗೊತ್ತಿಲ್ಲ. ಶಿವಪ್ಪನ ಹೆಂಡತಿ ಹೆಸರು ಗೊತ್ತಿಲ್ಲ. ಈರಪ್ಪನ ಹೆಂಡತಿ ಹೆಸರು ಸಂಕವ್ವ ಅಲಿಯಾಸ ಈರಬಸವ್ವ ಊರ್ಫಃ ಸಂಕವ್ವ ಅಂತಾ ಬರೆಸಿಲ್ಲ. ಶಿವಪ್ಪ ನ ಹೆಂಡತಿ ಮಹಾದೇವಿ. ಗಂಗಪ್ಪನ ಹೆಂಡತಿ ಹೆಸರು ಶಿವಗಂಗವ್ವ. ಫಕ್ಕೀರಪ್ಪನ 2 ಜನರ ಹೆಂಡತಿ ಹೆಸರು ಗೊತ್ತಿಲ್ಲ, ಒಬ್ಬ ಹೆಂಡತಿ ಹೆಸರು ಪಾರ್ವತೆವ್ವ. ನನ್ನ ಜನಕ ತಂದೆ ಹೆಸರು ಈರಪ್ಪ ತಾಯಿ ಹೆಸರು ಸಂಕವ್ವ ಊರ್ಫಃ ಈರಬಸವ್ವ. ಸಾಕಿದ ತಂದೆ ಹೆಸರು ಫಕ್ಕೀರಪ್ಪ. ಸಾಕಿದ ತಾಯಿ ಹೆಸರು ಪಾರ್ವತೆವ್ವ. ಫಕ್ಕೀರಪ್ಪನ 3 ಜನ ಮಕ್ಕಳ ಹೆಸರು 1) ಬಸವರಾಜ 2) ಈರಪ್ಪ, 3) ಗೋದಾವರಿ. ಬಸವರಾಜ ಫಕ್ಕೀರಪ್ಪ ಸಾಕಿದ ಮಗ. ಫಕ್ಕೀರಪ್ಪನ ಸ್ವಂತ ಮಗ. ಈರಣ್ಣ ಹಾಗೂ ಗೋದಾವರಿ ಸ್ವಂತ ಮಗಳು. ವಂಶಾವಳಿಯಲ್ಲಿ ಫಕ್ಕೀರಪ್ಪನ 3 ಜನ ಮಕ್ಕಳು ಹೆಸರು ಸರಿಯಾಗಿದೆ. ಫಕ್ಕೀರಪ್ಪನ 3 ಜನ ಸ್ವಂತ ಮಕ್ಕಳೆಂದು ಬರೆಸಿದ್ದೇನೆ ಅಂದರೆ ಸರಿ. ನನ್ನ ಹೆಸರು ಬಸವರಾಜ ತಂದೆ ಫಕ್ಕೀರಪ್ಪ ಮಡ್ಡಿ ಅಂತಾ ಬರೆಸಿದ್ದೇನೆ ಅಂದರೆ ಸರಿ. ವಾದ ಪತ್ರದಲ್ಲಿ ಈರಪ್ಪನ ಸ್ವಂತ ಮಗನೆಂದು ಬರೆಸಿಲ್ಲ ಅಂದರೆ ಸರಿ. ಫಕ್ಕೀರಪ್ಪ ವಿರುಪಾಕ್ಷಪ್ಪ ಮಡ್ಡಿ ರವರು 1996 ರಲ್ಲಿ ಮರಣ ಹೊಂದಿದ್ದಾರೆ. ಫಕ್ಕೀರಪ್ಪ ರವರು ದಿಃ 06.04.1997 ರಂದು ಮರಣ ಹೊಂದಿದ್ದಾರೆ ಅಂದರೆ ಸರಿ.

**O.S. 277-24 PW : 1**

ಈಗ ಸಾಕ್ಷಿಗೆ ಫಕ್ಕೀರಪ್ಪ ತಂದೆ ವಿರುಪಾಕ್ಷಪ್ಪ ರವರ ಕುಟುಂಬದ ಜೀವಂತ ಸದಸ್ಯರ ಪಟ್ಟಿ ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡಿರುವುದಿಲ್ಲ. ಫಕ್ಕೀರಪ್ಪ ನ ವಾರಸಾ ಪ್ರಮಾಣ ಪತ್ರ ಸಲ್ಲಿಸಲು ತೊಂದರೆ ಇಲ್ಲ. ಫಕ್ಕೀರಪ್ಪ ನ ವಾರಸಾ ದಾಖಲೆ ಪ್ರಕಾರ ಶ್ರೀಮತಿ ನೀಲವ್ವ ಕೋಂ. ಪ್ರಕಾಶ ವಡಗೇರಿ ಅಂತಾ ನನಗೆ ಗೊತ್ತಿಲ್ಲ. ಫಕ್ಕೀರಪ್ಪನ ಮಗಳು ನೀಲವ್ವ ಅಂತಾ ಗೊತ್ತಿದ್ದರೂ ಅವರನ್ನು ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿಯಲ್ಲ. ವಿರುಪಾಕ್ಷಪ್ಪ ವೀರಪ್ಪ ಮಡ್ಡಿ ರವರನ್ನು ಹೊರತುಪಡಿಸಿ, ಈ ಹೆಸರಿನವರನ್ನು ಬ್ಯಾಹಟ್ಟಿ ಗ್ರಾಮದಲ್ಲಿ ಯಾರು ಇಲ್ಲ ಅಂದರೆ ಸರಿ. ವಿರುಪಾಕ್ಷಪ್ಪ ವೀರಪ್ಪ ಮಡ್ಡಿ ರವರಿಗೆ ದಾವಾ ಆಸ್ತಿ ಹೊರತುಪಡಿಸಿ ಬೇರೆ ಆಸ್ತಿಗಳಿಲ್ಲ. ಆಸ್ತಿ ಕೇಳಿದರು ಕೊಡಲಿಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮುಂದಿನ ಪಾಟಿ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.